ಶಿಕ್ಷಣದ ಹಕ್ಕು
ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ
**ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು – 560 001**

**ಸಂಖ್ಯೆ:** ಸ.ಶಿ.ಅ/ಸಂ.ಮೌ/PINDICS/2014-15 ದಿನಾಂಕ: 20.11.2014

# ಮುದ್ರಣ ಮತ್ತು ಸರಬರಾಜು ಕಾರ್ಯಕ್ಕೆ ಕೊಟೇಶನ್ ಆಹ್ವಾನ

ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಡಿ 2014-15ನೇ ಸಾಲಿನಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಕಾರ್ಯನಿರ್ವಹಣಾ ಸಾಮರ್ಥ್ಯದ ಸೂಚಕಗಳನ್ನು ವಿನ್ಯಾಸಗೊಳಿಸಿ ಮುದ್ರಿಸಿ ವಿತರಿಸಲು ಉದ್ದೇಶಿಸಲಾಗಿರುತ್ತದೆ. ಸದರಿ ಪ್ರಾಥಮಿಕ ಶಾಲಾ ಶಿಕ್ಷಕರ ಕಾರ್ಯನಿರ್ವಹಣಾ ಸಾಮರ್ಥ್ಯದ ಸೂಚಕಗಳನ್ನು ವಿನ್ಯಾಸಗೊಳಿಸಿ ಮುದ್ರಣ ಹಾಗೂ ಸರಬರಾಜು ಮಾಡಲು ಮುದ್ರಕರಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

**ತಾಂತ್ರಿಕ ವಿಶಿಷ್ಟತೆಗಳು:**

| ಕ್ರ.ಸಂ. | ವಿಷಯ | ವಿವರ |
|---|---|---|
| 1 | ಶೀರ್ಷಿಕೆ | **"ಪ್ರಾಥಮಿಕ ಶಾಲಾ ಶಿಕ್ಷಕರ ಕಾರ್ಯನಿರ್ವಹಣಾ ಸಾಮರ್ಥ್ಯದ ಸೂಚಕಗಳ ನಮೂನೆಗಳು"** |
| (a) | ಬಣ್ಣ | ಕಪ್ಪು ಬಿಳುಪು, ಸಿಂಗಲ್ ಕಲರ್ |
| (b) | ಅಳತೆ | ಅಳತೆ-1/4 ಡೆಮ್ಮಿ (21 cm x 28 cm) |
| 3 | ಮುದ್ರಿಸಲು ಉಪಯೋಗಿಸಲು ಬೇಕಾದ ಕಾಗದ | 70 ಜಿ.ಎಸ್.ಎಂ. ಮಾಪ್‌ಲಿಥೋ ಕಾಗದ |
| 5 | ಬೈಂಡಿಂಗ್ | ಸೆಂಟರ್ ಪಿನ್ನಿಂಗ್(Centre Pining) |
| 6 | ಮುದ್ರಿಸಬೇಕಾದ ನಮೂನೆ ಸಂಖ್ಯೆ (ಅಂದಾಜು ನಮೂನೆಗಳ ಸಂಖ್ಯೆ) | **ಶಿಕ್ಷಕರ ನಮೂನೆ**<br>(9 ಪುಟಗಳು {5 ಹಾಳೆಗಳು} B/B): 203900<br>**ಮುಖ್ಯ ಶಿಕ್ಷಕರ ನಮೂನೆ**<br>(3ಪುಟಗಳು {2 ಹಾಳೆಗಳು} B/B): 48200<br>**ಸಿ.ಆರ್.ಪಿ ನಮೂನೆ** (1ಪುಟಗಳು B/B): 4150 |
| 7 | ಸರಬರಾಜು ಮಾಡಬೇಕಾದ ಸ್ಥಳ | ಸೂಚಿತ ಸಂಖ್ಯೆಗಳಿಗೆ ಅನುಗುಣವಾಗಿ ಬ್ಲಾಕ್‌ವಾರು ಪ್ಯಾಕ್‌ಮಾಡಿ ಬಂಡಲ್‌ಗಳಲ್ಲಿ ರಾಜ್ಯದ ಎಲ್ಲಾ 34 ಡಿ.ಡಿ.ಪಿ.ಐ ಕಛೇರಿಗಳಿಗೆ ಹಾಗೂ ರಾಜ್ಯ ಯೋಜನಾ ಕಛೇರಿಗೆ ಸರಬರಾಜು ಮಾಡುವುದು. |
| 8 | ವಿನ್ಯಾಸ ಮುದ್ರಿಸಬೇಕಾದ ಸಾಹಿತ್ಯ | ರಾಜ್ಯ ಕಛೇರಿಯಿಂದ ಸಾಹಿತ್ಯವನ್ನು ನೀಡಲಾಗುವುದು |

**ಷರತ್ತುಗಳು:**

1. ಮುದ್ರಕರು ಸಲ್ಲಿಸುವ ದರಪಟ್ಟಿಯು **90** ದಿನಗಳವರೆಗೆ ಚಾಲ್ತಿಯಲ್ಲಿರುತ್ತದೆ.
2. ದರಪಟ್ಟಿಯೊಂದಿಗೆ **ರೂ.16000/-ಗಳ** ಇ.ಎಂ.ಡಿ. ಹಣವಾಗಿ **'ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ-ಕರ್ನಾಟಕ'** ಇವರ ಹೆಸರಿಗೆ ಬ್ಯಾಂಕ್ ಹುಂಡಿಯನ್ನು ಖರೀದಿಸಿ ಲಗತ್ತಿಸಬೇಕು.
3. ಮುದ್ರಕರು ತಾಂತ್ರಿಕ ದಾಖಲೆಗಳು ಮತ್ತು ಆರ್ಥಿಕ ದರಪಟ್ಟಿಯನ್ನು ಪ್ರತ್ಯೇಕ ಲಕೋಟೆಯಲ್ಲಿ ಇಟ್ಟು ಮೊಹರು ಮಾಡಿ ಅದರ ಮೇಲೆ **"ಪ್ರಾಥಮಿಕ ಶಾಲಾ ಶಿಕ್ಷಕರ ಕಾರ್ಯನಿರ್ವಹಣಾ ಸಾಮರ್ಥ್ಯದ ಸೂಚಕಗಳ ನಮೂನೆಗಳ ದರಪಟ್ಟಿ"** ಎಂದು ಬರೆದು ಸಲ್ಲಿಸುವುದು.
4. ತಾಂತ್ರಿಕ ದಾಖಲೆಗಳು ಈ ಕೆಳಕಂಡ ಅಂಶಗಳನ್ನು ಒಳಗೊಂಡಿರಬೇಕು.
   ಅ) ಸಂಸ್ಥೆಯು ಕರ್ನಾಟಕ ಸರ್ಕಾರದಿಂದ ನೋಂದಣಿಯಾಗಿರುವ ದಾಖಲೆಗಳನ್ನು ಒದಗಿಸಬೇಕು.
   ಆ) 2012-13 ಮತ್ತು 2013-14ನೇ ಸಾಲಿನ ಆದಾಯ ತೆರಿಗೆ ಪಾವತಿಸಿರುವ ದಾಖಲೆ.
   ಇ) ಮುದ್ರಣ ಕಾರ್ಯದಲ್ಲಿ ಅನುಭವಯುಳ್ಳ ದಾಖಲೆಗಳು(2ವರ್ಷಗಳು)
   ಈ) 2012-13 ಮತ್ತು 2013-14ನೇ ಸಾಲಿನಲ್ಲಿ ಸರಾಸರಿ ರೂ.25 ಲಕ್ಷಗಳ ವಹಿವಾಟು ಆಗಿರುವ ಬಗ್ಗೆ ದಾಖಲೆ.
5. ಆರ್ಥಿಕ ದರಪಟ್ಟಿಯಲ್ಲಿ ಮುದ್ರಕರು ಪ್ರತಿ ಮಾಧ್ಯಮದಲ್ಲಿ ಪ್ರತಿ ನಮೂನೆ ವಿನ್ಯಾಸ ಮತ್ತು ಮುದ್ರಣಕ್ಕೆ ತಗಲುವ ದರವನ್ನು ಪೇಪರ್ ವೆಚ್ಚ, ಮುದ್ರಣ ವೆಚ್ಚ, ವಿತರಣಾ ವೆಚ್ಚ ಹಾಗೂ ತೆರಿಗೆಯನ್ನು ಒಳಗೊಂಡಿರಬೇಕು. ಪುಟ ಸಂಖ್ಯೆ ಕಡಿಮೆ/ಜಾಸ್ತಿ ಆದಲ್ಲಿ **'Prorata'** ಆಧಾರದಲ್ಲಿ ಕಡಿಮೆ/ಹೆಚ್ಚಿನ ಹಣ ಪಾವತಿಸಲಾಗುವುದು.
6. ತಾಂತ್ರಿಕ ದಾಖಲೆಗಳನ್ನು ಸೂಕ್ತ ರೀತಿಯಲ್ಲಿ ನೀಡದಿದಲ್ಲಿ ತಮ್ಮ ಪ್ರಸ್ತಾವನೆಯನ್ನು ತಿರಸ್ಕರಿಸಲಾಗುವುದು ಹಾಗೂ ಆರ್ಥಿಕ ದರಪಟ್ಟಿಯನ್ನು ತೆರೆಯುವುದಿಲ್ಲ.
7. ಯಶಸ್ವೀ ಬಿಡ್‌ದಾರರು ಕಾರ್ಯಾದೇಶ ಪಡೆದ ಮೂರು ದಿನಗಳೊಳಗಾಗಿ ಬಿಡ್‌ನ ಒಟ್ಟು ಹಣದ **ಶೇಕಡ 5 ರಷ್ಟು** ಹಣವನ್ನು ಭದ್ರತಾ ಠೇವಣಿಯಾಗಿ ಬ್ಯಾಂಕ್ ಹುಂಡಿಯೊಂದಿಗೆ ಎಂ.ಓ.ಯು. ಮಾಡಿಕೊಳ್ಳತಕ್ಕದ್ದು.
8. ನಮೂನೆಗಳನ್ನು ಸೂಚಿತ ಸಂಖ್ಯೆಗಳಿಗೆ ಅನುಗುಣವಾಗಿ ಬ್ಲಾಕ್‌ವಾರು ಪ್ಯಾಕ್‌ಮಾಡಿ ಬಂಡಲ್‌ಗಳಲ್ಲಿ ರಾಜ್ಯದ ಎಲ್ಲಾ 34 ಡಿ.ಡಿ.ಪಿ.ಐ ಕಛೇರಿಗಳಿಗೆ ಹಾಗೂ ರಾಜ್ಯ ಯೋಜನಾ ಕಛೇರಿಗೆ ಸರಬರಾಜು ಮಾಡುವುದು.
9. ನಿಗದಿತ ಕಾಲಮಿತಿಯೊಳಗೆ ಮುದ್ರಣ ಹಾಗೂ ಸರಬರಾಜು ಕಾರ್ಯವನ್ನು ಪೂರೈಸದಿದ್ದಲ್ಲಿ ದಿನವೊಂದಕ್ಕೆ ಒಟ್ಟು ಮೊತ್ತದ 0.1 ಪ್ರತಿಶತ ದಂಡವಿಧಿಸಲಾಗುತ್ತದೆ.
10. ದರಪಟ್ಟಿಯನ್ನು **ದಿನಾಂಕ: 29.11.2014ರ ಸಂಜೆ 4.30** ಗಂಟೆಯೊಳಗಾಗಿ ಈ ಕಛೇರಿಗೆ ಸಲ್ಲಿಸಬೇಕು. ತಡವಾಗಿ ಸಲ್ಲಿಸುವ ದರಪಟ್ಟಿಗಳನ್ನು ಸ್ವೀಕರಿಸಲಾಗುವುದಿಲ್ಲ.
11. ದರಪಟ್ಟಿಯನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕು ರಾಜ್ಯ ಯೋಜನಾ ನಿರ್ದೇಶಕರಿಗೆ ಇರುತ್ತದೆ.

**ನಿರ್ದೇಶಕರು (ಕಾರ್ಯಕ್ರಮಗಳು)**
**ಸರ್ವ ಶಿಕ್ಷಣ ಅಭಿಯಾನ-ಕರ್ನಾಟಕ**

D:\D drive\PINDICS FOR 2014-15\Quotation.doc